# ಮಂತ್ರ ಮಾಂಗಲ್ಯ

## ವಿವಾಹ ಸಂಹಿತೆ

ಶ್ರೀಯುತ ………………………………………………. ಎಂಬ ವರನೇ
ಶ್ರೀಮತಿ ………………………………………………. ಎಂಬ ವಧುವೇ

**ನಿಮ್ಮಿಬ್ಬರ ವಿವಾಹದ ಈ ಸಂಧರ್ಭದಲ್ಲಿ ಈ ಕೆಲವು ಮೂಲಭೂತ ಸ್ವಾತಂತ್ರ್ಯದ ಸಂದೇಶಗಳನ್ನು ತಿಳಿಸಿದ್ದೇವೆ. ದಯವಿಟ್ಟು ನೀವಿಬ್ಬರೂ ಗಮನವಿಟ್ಟು ಕೇಳಿಕೊಳ್ಳಿರಿ.**

೧. ಈ ದಿನ ಇಲ್ಲಿ ಈ ರೀತಿ ಮದುವೆಯಗುವುದರ ಮೂಲಕ ನೀವು ನಿಮ್ಮ ಎಲ್ಲ ಮಾನಸಿಕ ಮತ್ತು ಆಧ್ಯಾತ್ಮಿಕ ಸಂಕೋಲೆ ಮತ್ತು ದಾಸ್ಯಗಳಿಂದ ವಿಮುಕ್ತರಾಗಿ ಸ್ವತಂತ್ರರಾಗುತ್ತಿದ್ದೀರಿ.

೨. ನೀವು ಇನ್ನು ಈ ಭೂಮಂಡಲದ ಯಾವುದೇ ಜಾತಿ ಮತ್ತು ಜನಾಂಗಗಳಿಗಿಂತ ಮೇಲಾದವರಲ್ಲ.

೩. ಹಾಗೆಯೇ ಯಾವುದೇ ಜಾತಿ ಮತ್ತು ಜನಾಂಗಗಳಿಗಿಂತ ಕೀಳಾದವರೂ ಅಲ್ಲ.

೪. ನಿಮ್ಮನ್ನು ಇಂದು ಮನುಷ್ಯ ಸಮಾಜದ ಎಲ್ಲ ಕೃತಕ ಜಾತಿಗಳಿಂದ ಮುಕ್ತರನ್ನಾಗಿ ಮಾಡಿದ್ದೇವೆ.

೫. ನಿಮ್ಮನ್ನು ಇಂದು ಎಲ್ಲಾ ಸಂಕಚಿತ ಮತಧರ್ಮಗಳಿಂದ ಮುಕ್ತರನ್ನಾಗಿ ಮಾಡಿದ್ದೇವೆ.

೬. ನಿಮ್ಮನ್ನು ಎಲ್ಲ ಆಚಾರ ಸಂಪ್ರದಾಯಗಳಿಂದ ಮುಕ್ತ್ರನ್ನಾಗಿ ಮಾಡಿದ್ದೇವೆ.

೭. ನಿಮ್ಮನ್ನು ಎಲ್ಲಾ ಅಸತ್ಯ ಮತ್ತು ಮೂಢನಂಬಿಕೆಗಳಿಂದ ಮುಕ್ತರನ್ನಾಗಿ ಮಾಡಿದ್ದೇವೆ.

೮. ಮನುಷ್ಯನ ಜೀವಿತ ಕಾಲವೇ ಒಂದು ಸುಮುಹೂರ್ತ. ಇದರೊಳಗೆ ನೀನು ಬೇರೆ ಸುಮುಹೂರ್ತಗಳನ್ನೂ, ರಾಹುಕಾಲ, ಗುಳಿಕಕಾಲಗಳನ್ನೂ ನೋಡುವ ಅಗತ್ಯವಿಲ್ಲ. ಕಾಲವು ನಿರ್ಗುಣ.

೯. ಎಂದೂ ಸಂಪಾದಿಸಲು, ಸೃಷ್ಟಿಸಲು, ಕೂಡಿಡಲು ಸಾಧ್ಯವೇ ಇಲ್ಲದ. ಮನುಷ್ಯನ ಜೀವಿತಕಾಲದ ಪ್ರತಿ ಕ್ಷಣವೂ ಅತ್ಯಮೂಲ್ಯ. ಯಾರು ಈ ಸತ್ಯವನ್ನು ಅರಯುತ್ತಾರೋ ಅವರು ತಮ್ಮ ಕರ್ತವ್ಯ ಮತ್ತು ನಡವಳಿಕೆಗಳಿಂದ ಕಾಲವನ್ನು ಒಳ್ಳೆಯ ಅಥವಾ ಕೆಟ್ಟ ಕಾಲವನ್ನಾಗಿ ಪರಿವರ್ತಿಸಬಲ್ಲರು.

೧೦. ನೀವು ಯಾವುದೇ ಮನೆದೇವರು ಅಥವಾ ಕುಲದೇವರುಗಳ ಅಡಿಯಾಳಾಗಿ ಬದುಕಬೇಕಾಗಿಲ್ಲ ಮನುಷ್ಯ ಸಮಾಜದ ಮಾನವೀಯ ಮೌಲ್ಯಗಳೇ ಮನುಷ್ಯನ ಮೊದಲನೆಯ ಹಾಗೂ ಕೊನೆಯ ದೇವರು.

೧೧. ಮಾನವರೆಲ್ಲರೂ ಸಮಾನರು. ಪುರುಷನು ಸ್ತ್ರೀಗಿಂತ ಮೇಲು ಎಂದು ಹೇಳುವ ಎಲ್ಲ ಧರ್ಮಗಳನ್ನೂ, ಎಲ್ಲ ಸಂಪ್ರದಾಯಗಳನ್ನೂ ನೀವು ಇಂದು ತಿರಸ್ಕರಿಸಿದ್ದೀರಿ.

೧೨. ಹೆಂಡತಿಯಾಗಲೀ, ಗಂಡನಾಗಲೀ ಪರಸ್ಪರ ಆಧೀನರೂ ಅಲ್ಲ: ಆಜ್ಞಾನುವರ್ತಿಯೂ ಅಲ್ಲ. ಹೆಂಡತಿಯೂ ಗಂಡನಷ್ಟೇ ಸ್ವತಂತ್ರಳೂ ಸಮಾನತೆಯುಳ್ಳವಳೂ ಆಗಿರುತ್ತಾಳೆ.

೧೩. ಗಂಡ-ಹೆಂಡಿರನ್ನು ಒಟ್ಟಿಗೇ ಬದುಕುವಂತೆ ಮಾಡುವ ಸಾಧನ ಪ್ರೀತಿಯೊಂದೇ. ಒಬ್ಬರನ್ನೊಬ್ಬರು ಪ್ರೀತಿಸದವರು ತಾಳಿ ಕಟ್ಟಿಕೊಂಡರೂ ವ್ಯರ್ಥ, ಅಗ್ನಿಯನ್ನು ಸುತ್ತಿದರೂ ವ್ಯರ್ಥ, ಯಾವ ಯಾವ ಶಾಸ್ತ್ರಾಚಾರದ ಪ್ರಕಾರ ಮದುವೆಯಾದರೂ ವ್ಯರ್ಥ.

೧೪. ದೇವರ ಬಗ್ಗೆ ಎಂದೂ ಸುಳ್ಳು ಹೇಳಕೂಡದು. ನಿಮ್ಮ ಅನುಭವ, ನಿಮಗೆ ದೇವರು ಇಲ್ಲವೆಂದು ತಿಳಿಸಿದರೆ ದೇವರು ಇಲ್ಲವೆಂದು ಹೇಳಿ.

೧೫. ನಿಮ್ಮ ಅನುಭವ, ನಿಮಗೆ ದೇವರು ಇದ್ದಾನೆಂದು ತಿಳಿಸಿದರೆ ದೇವರು ಇದ್ದಾನೆಂದು ಹೇಳಿ.

೧೬. ನಿಮ್ಮ ಅನುಭವ, ದೇವರು ಇದ್ದಾನೆಯೋ ಇಲ್ಲವೋ ತಿಳಿಯದೆಂದು ತಿಳಿದರೆ. ದೇವರು ಇದ್ದಾನೆಯೋ ಇಲ್ಲವೋ ತಿಳಿಯದೆಂದು ಹೇಳಿ.

೧೭. ನಮ್ಮ ಅನುಭವವನ್ನು ಸುಳ್ಳು ಹೇಳದೆ ಒಪ್ಪಿಕೊಳ್ಳುವುದು, ನಿರ್ಭೀತಿಯಿಂದ ವಾಸ್ತವ ಸ್ಥಿತಿಯನ್ನು ನೋಡುವುದು. ಸತ್ಯಾನ್ವೇಷಣೆಯ ಮೊದಲನೆಯ ಹಂತ, ಜ್ಞಾನ ಯೋಗದ ಮೊದಲ ಪಾಠ

೧೮. ಪರವಂಚನೆ ಮತ್ತು ಆತ್ಮವಂಚನೆ ಮಾಡಿಕೊಳ್ಳುವವನಿಗೆ ತಮಸ್ಸಿನಿಂದಲೂ. ಆಜ್ಞಾನದಿಂದಲೂ ವಿಮುಕ್ತಿಯೇ ಇಲ್ಲ.

೧೯. ದೇವರ ಹೆಸರಿನಲ್ಲಿ ಸುಳ್ಳು ಹೇಳುವ ಮಠಾಧಿಪತಿಗಳನ್ನು ಆಚಾರ್ಯರನ್ನೂ ಜಗದ್ಗುರುಗಳನ್ನೂ ತಿರಸ್ಕರಿಸಿರಿ.

೨೦. ದೇವರ ಹೆಸರಿನಲ್ಲಿ ಧನಾರ್ಜನೆ ಮಾಡುವ ತೀರ್ಥಕ್ಷೇತ್ರಗಳನ್ನೂ, ದೇವಸ್ಥಾನಗಳನ್ನೂ ತಿರಸ್ಕರಿಸಿರಿ. ದೇವರ ಹೆಸರಿನಲ್ಲಿ ದರೋಡೆ ಮಾಡುವ ಯಾತ್ರಾಸ್ಥಳಗಳನ್ನೂ ತಿರಸ್ಕರಿಸಿರಿ.

ವರದಕ್ಷಿಣೆ ಅಥವಾ ವಧುದಕ್ಷಿಣೆ ವ್ಯವಹಾರಗಳಿಗೆ ಒಳಗಾಗದೆ, ನೀವು ನಿಮ್ಮ ಸ್ವಂತ ಪ್ರಯತ್ನದಿಂದ ನಿಮ್ಮ ತಂದೆ ತಾಯಿಗಳಿಗೆ ಯಾವ ರೀತಿಯ ಆರ್ಥಿಕ ಹೊರೆಯಾಗದಂತೆ ವಿವಾಹ ಮಾಡಿಕೊಳ್ಳುತಿದ್ದೀರಿ.


ಎಲ್ಲ ಮತಧರ್ಮ, ಕಂದಾಚಾರ, ಆಜ್ಞಾನಗಳಿಂದ ವಿಮುಕ್ತರಾಗಿರುವ ವಧೂವರರೇ, ಮಾನವ ಕೋಟಿಯನ್ನು ನಿಮ್ಮಂತೆಯೇ ವಿಮುಕ್ತರನ್ನಾಗಿ ಮಾಡುವ ಪವಿತ್ರ  ಕರ್ತವ್ಯವನ್ನು ನೀವೂ ಮಾಡಿರಿ. ಇನ್ನು ಯಾವುದೇ ಧರ್ಮಕ್ಕೂ ಸೇರುವ ಅಗತ್ಯವಿಲ್ಲ. ಯಾವುದೇ ಮತಕ್ಕೂ ಸೇರುವ  ಅಗತ್ಯವಿಲ್ಲ. ಯಾವುದೇ ಶಾಸ್ತ್ರಾಚಾರವನ್ನೂ ಅನುಸರಿಸಬೇಕಾದ ಅಗತ್ಯವಿಲ್ಲ. ಮೇಲೆ ಬೋಧಿಸಿರುವ ಪ್ರತಿಜ್ಞಾವಿಧಿಗಳೇ ನಿಮ್ಮ ಜೀವನದ ದಾರಿದೀಪವಾಗಲಿ. ಮೌಢ್ಯ, ಆಜ್ಞಾನ, ಅಂಧಕಾರಗಳ ವಿರುದ್ಧ ಭಾರತೀಯರಾದ ನಾವೆಲ್ಲ ಹೂಡಿರುವ ಈ ಮಹಾ ಹೋರಾಟದಲ್ಲಿ ನೀವೂ ಭಾಗಿಗಳಾಗಬೇಕೆಂದು ನಾವು ವಿನಂತಿಸಿಕೊಳ್ಳುತ್ತೇವೆ. ನೀವು ಇಲ್ಲಿ ಈ ದಿನದಿಂದ ದಂಪತಿಗಳೆಂದು ನಾವು ಘೋಷಿಸುತ್ತೇವೆ.

ವರನ ಸಹಿ ವಧುವಿನ ಸಹಿ

**ಸಾಕ್ಷಿಗಳು:**

ವರನ ತಂದೆ-ತಾಯಿ ವಧುವಿನ ತಂದೆ- ತಾಯಿ

**ಬಂಧು, ಬಳಗ, ಸ್ನೇಹಿತರು:**



ಶ್ರೀ

"ಚಿತ್ರಕೂಟ",
ಗೋಣಿಬೀಡು ಅಂಚೆ,
ಚಿಕ್ಕಮಗಳೂರು ಜಿಲ್ಲೆ.

ದಿನಾಂಕ 27/11/1966

ಶ್ರೀಯುತ/ ಶ್ರೀಮತಿ

ನಾವೆಲ್ಲರೂ ಕ್ಷೇಮ ಎಂದು ಹಾರೈಸುತ್ತೇವೆ.
ಈ ಕಾಗದ ಬರೆಯುತ್ತಿರುವ ವಿಶೇಷ ಕಾರಣವೇನೆಂದರೆ: ನಮ್ಮ ಜ್ಯೇಷ್ಠಪುತ್ರ ಚಿರಂಜೀವಿ ಕೆ. ಪಿ. ಪೂರ್ಣಚಂದ್ರ ತೇಜಸ್ವಿ ಎಂ.ಎ., ಮತ್ತು ದಿವಂಗತ ಶ್ರೀ ರಂಗಪ್ಪನವರ ಪುತ್ರಿ ಕುಮಾರಿ ಆರ್. ರಾಜೇಶ್ವರಿ ಎಂ.ಎ., ಇವರಿಗೆ ದಿನಾಂಕ 27-11-1966 ರಂದು "ಚಿತ್ರಕೂಟ"ದಲ್ಲಿ ಮದುವೆ ನಡೆಯುತ್ತದೆ. ನಮ್ಮ ಹಿತೈಷಿಗಳಾದ ತಾವು ತಮಗೆ ಅನುಕೂಲವಿದ್ದಾಗ "ಚಿತ್ರಕೂಟ"ಕ್ಕೆ ಆಗಮಿಸಿ, ವಧೂವರರ ಆತಿಥ್ಯ ಸ್ವೀಕರಿಸಿ, ಅವರನ್ನು ಆಶೀರ್ವದಿಸಿ, ಅವರ ಶ್ರೇಯೋಭಿವೃದ್ಧಿ ಕೋರಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇವೆ.

ಇತಿ
ಕುವೆಂಪು ದಂಪತಿ

ಶ್ರೀ ಕುವೆಂಪು ಅವರು ತಮ್ಮ ಪುತ್ರ ಶ್ರೀ ಪೂರ್ಣಚಂದ್ರ ತೇಜಸ್ವಿ ಅವರ ವಿವಾಹ ಸಂದರ್ಭದಲ್ಲಿ ಸ್ವಹಸ್ತಾಕರದಲ್ಲಿ ಬರೆದ ಮದುವೆ ಪತ್ರವನ್ನು ಮಂತ್ರಮಾಂಗಲ್ಯ ವಿಧಾನದಲ್ಲಿ ಮದುವೆಯಾಗ ಬಯಸುವವರಿಗೆ ಮಾದರಿಗೆಂದು ಇಲ್ಲಿ ಕೊಟ್ಟಿದ್ದೇವೆ. ಇದು ಮದುವೆ ನಡೆಯುವುದನ್ನು ಎಲ್ಲರಿಗೂ ತಿಳಿಸುವ ಪತ್ರವೇ ಹೊರತು ಮದುವೆಗೆ ಆಮಂತ್ರಣ ಪತ್ರ ಅಲ್ಲ. ತಮ್ಮ ಹಿತೈಷಿಗಳಿಗೂ ಗುರುಹಿರಿಯರಿಗೂ ಅವರು ಅನುಕೂಲವಿರಾಮ ದೊರೆತಾಗ ಬಂದು ವಧೂವರರ ಆತಿಥ್ಯ ಸ್ವೀಕರಿಸಿ ಅವರನ್ನು ಆಶೀರ್ವದಿಸಿ ಎಂದು ಹೇಳಿದ್ದಾರೆಯೇ ಹೊರತು ಎಲ್ಲರಿಗೂ ಮದುವೆಗೆ ಬನ್ನಿ ಎಂದು ಆಮಂತ್ರಿಸಿಲ್ಲ ಎಂಬುದನ್ನು ಗಮನಿಸಿ. ತಾವೂ ಸಹ ಇದೇ ವಿಧಾನವನ್ನನುಸರಿಸಿ ಮದುವೆ ಸಂದರ್ಭದಲ್ಲಿ ಅನವಶ್ಯಕ ಜನಜಂಗಳಿಯನ್ನು ನಿವಾರಿಸಬಹುದು ಮತ್ತು ಬಹುಪಾಲು ಸ್ನೇಹಿತರನ್ನು ಅವರ ಮತ್ತು ನಿಮ್ಮ ಅನುಕೂಲ ವಿರಾಮವನ್ನವಲಂಬಿಸಿ ನಿಧಾನವಾಗಿ ಕರೆದು ಸತ್ಕರಿಸಬಹುದು.

**ಕೆಲವು ಸೂಚನೆ ಹಾಗೂ ಮನವಿಗಳು**

(ಈ ಕೆಳಕಂಡ ಕೆಲವು ಸೂಚನೆಗಳು ಯಾವುವೂ ಕಡ್ಡಾಯ ನಿಬಂಧನೆಗಳಲ್ಲ. ಮಂತ್ರ ಮಾಂಗಲ್ಯದ ಪ್ರಕಾರ ಮದುವೆಯಾದ ನಿಮ್ಮ ವೈಯಕ್ತಿಕ ಬದುಕಿನ ಸುಧಾರಣೆಯೊಂದಿಗೆ ಭಾರತದ ಸಾಮಾಜಿಕ ಸ್ಥಿತಿಗಳಿಗಳೂ ಬದಲಾಗಲೆಂಬ ಸದಾಶಯದಿಂದ ಈ ಕೆಳಗಿನ ಸೂಚನೆಗಳನ್ನು ಪಾಲಿಸಲು ಪ್ರಯತ್ನಿಸಿ.)

ಸಾಂಪ್ರದಾಯಕ ಆಡಂಬರದ ವಿವಾಹಗಳನ್ನೂ ವರದಕ್ಷಿಣೆಯ ದಳ್ಳಾಳಿ ವಿವಾಹಗಳನ್ನೂ ಪ್ರೋತ್ಸಾಹಿಸದಿರಲು ಪ್ರಯತ್ನಿಸಿ, ಪ್ರತಿಭಟಿಸಿ ಹೋರಾಡಲು ಸಾಧ್ಯವಾಗದಿದ್ದರೂ ಕೊನೆಯಪಕ್ಷ ಅದರಲ್ಲಿ ಭಾಗಿಗಳಾಗದೆ ಉಳಿಯಲು ಪ್ರಯತ್ನಿಸಿ, ಮಂತ್ರಮಾಂಗಲ್ಯದ ಕರ್ತೃಗಳಾದ ಶ್ರೀಕುವೆಂಪು ಇಂಥ ವಿವಾಹಗಳಲ್ಲಿ ಎಂದೂ ಭಾಗಿಗಳಾಗಲಿಲ್ಲ.

ಮದುವೆ ಸಮಾರಂಭಗಳಲ್ಲಿ ಕೊಡುವ ಫಲತಾಂಬೂಲಗಳಿಗೆ ಬದಲು ಅನುಕೂಲವಿದ್ದವರು ಅತಿಥಿಗಳಿಗೆ ಒಂದೊಂದು ಮಂತ್ರಮಾಂಗಲ್ಯ ಪುಸ್ತಕವನ್ನು ಕೊಡಿರಿ. ಈ ಪುಸ್ತಕದಲ್ಲಿನ ಶ್ರೀಕುವೆಂಪು ಅವರ ಧ್ಯೇಯಾದರ್ಶಗಳು ಮತ್ತು ಆಲೋಚನೆಗಳು ನಿಧಾನವಾಗಿಯಾದರೂ ಅವರ ಮತ್ತು ಅದನ್ನು ಓದುವ ಇತರರ ಮನಸ್ಸನ್ನು ಪರಿವರ್ತಿಸಿ ಊರ್ಧ್ವಗಾಮಿಯಾಗುವಂತೆ ಮಾಡುತ್ತವೆ. ಯುವಕರಲ್ಲಿ ನಿಮ್ಮಂತೆಯೇ ಇಂದು ಸದ್ದಿಲ್ಲದೆ ಸಂಭವಿಸುತ್ತಿರುವ ವಿಚಾರಕ್ರಾಂತಿಗೆ ಇದು ಸಹಾಯ ಮಾಡುತ್ತದೆ.

ಈ ಕ್ರಮದಲ್ಲಿ ಸಂಪ್ರದಾಯಾಗಳನ್ನು ತಿರಸ್ಕರಿಸಿ ಮದುವೆಯಾದ ವಧೂವರರನ್ನು ಜಾತ್ಯಾತೀತರೆಂದು ಪರಿಗಣಿಸಿ ಅವರಿಗೂ ಸರ್ಕಾರೀ ಸೌಲಭ್ಯಗಳಲ್ಲಿ, ನೌಕರಿಯಲ್ಲಿ ಮೀಸಲಾತಿ ಸೌಲಭ್ಯ ಒದಗಿಸಲು ಮತ್ತು ಅವರ ಮಕ್ಕಳಿಗೆ ಒಂದು ತಲೆಮಾರಿಗೆ ಮಾತ್ರ ವಿದ್ಯಾಭ್ಯಾಸದಲ್ಲಿ ಮೀಸಲಾತಿ ಒದಗಿಸಲೂ ಪ್ರಯತ್ನಿದ್ದೇವೆ. ಜಾತೀಯತೆ ಉಲ್ಬಣಗೊಳ್ಳುತ್ತಿರುವ ಬಾರತೀಯ ಸಾಮಾಜಿಕ ಸಂದರ್ಭದಲ್ಲಿ ಜಾತ್ಯಾತೀತ ಧೋರಣೆಯವರ  ಸಂಘಟಿತ ಪ್ರಯತ್ನ ಅನಿವಾರ್ಯವಾಗಿದೆ.

ಮಂತ್ರಮಾಂಗಲ್ಯದ ಪ್ರಕಾರ ಮದುವೆಯಾದವರು ಇದರ ಮೂಲ ಆಶಯಕ್ಕೆ ಭಂಗ ಬರದಂತೆ ಅದರ ವಿಧಿ ವಿಧಾನಗಳಲ್ಲಿ ಅಲ್ಪಸ್ವಲ್ಪ ಮಾರ್ಪಾಡುಗಳನ್ನು ಮಾಡಬಹುದು. ಶ್ರೀಕುವೆಂಪು ಅವರೇ ಕಾಲಾನುಕ್ರಮದಲ್ಲಿ

ಕೊಂಚಕೊಂಚ ಮಾರ್ಪಾಡು ಮಾಡಿರುವುದರಿಂದ ತಮಗೆ ಉಚಿತವೆನ್ನಿಸಿದ ಬದಲಾವಣೆಗಳನ್ನು ನಮಗೆ ತಿಳಿಸಿದರೆ ಅದನ್ನು ಪರಿಗಣಿಸಲಾಗುತ್ತದೆ.

# ಮಂತ್ರ ಮಾಂಗಲ್ಯ(1)

ಇದು ಮಂತ್ರಗಳ ಮತ್ತು ಹಲವಾರು ಸನ್ನಡವಳಿಕೆ ಸಂಹಿತೆಗಳ ಒಂದು ಸಂಕಲನ. ಮಂತ್ರ ಎಂಬ ಪದ ತನ್ನ ಧ್ವನಿಶಕ್ತಿಯ ವಿಶಾಲಾರ್ಥದಲ್ಲಿ ಸ್ತೋತ್ರ ಪ್ರಾರ್ಥನೆ. ಹಾರೈಕೆ ಮೊದಲಾದ ಮಾನವೀಯ ಆಶಯಗಳನ್ನೆಲ್ಲ ಒಳಗೊಳ್ಳುತ್ತದೆ. ನಮ್ಮ ದೇಶದ ಋಷಿಗಳೂ ದಾರ್ಶನಿಕರೂ ಸಂತರೂ ರಚಿಸಿದ ಮಂತ್ರ. ಸ್ತೋತ್ರ. ಪ್ರಾರ್ಥನೆಗಳು ಇಲ್ಲಿವೆ. ಇದರೊಡನೆ ಗಂಡು ಹೆಣ್ಣುಗಳಿಗೆ ಮದುವೆ ಮಾಡಿಸುವ ಹಿರಿಯರು ಅವರಿಗೆ ಉಪದೇಶಿಸಬೇಕಾದ ಮಾರ್ಗದರ್ಶಕ ನಡವಳಿಕೆ ಸಂಹಿತೆಯೂ ಇದೆ. ತಮ್ಮ ಜೀವನವು ಮಂಗಳಮಯವಾಗಲೆಂದು ಎಲ್ಲರೂ ನಿತ್ಯವೂ ಈ ಮಂತ್ರಗಳನ್ನು ಧ್ಯಾನಿಸಿ ತಮ್ಮ ತಮ್ಮ ಜೀವನ ಸಂದರ್ಭಗಳಲ್ಲಿ ಅವುಗಳಿಂದ ಹೊಮ್ಮುವ ಅರ್ಥಗಳನ್ನು ಗ್ರಹಿಸಿ ಬದುಕಿನ ಸತ್ಯಾನ್ವೇಷಣೆಯ ಪಥದಲ್ಲಿ ಮುಂದುವರಿಯಬಹುದು. ಇವುಗಳಿಗೆ ಪೂರಕವಾಗಿರುವ ವಿವಾಹ ಸಂಹಿತೆ ಪ್ರತಿ ವಧೂವರರಿಗೂ ನಿರ್ದಿಷ್ಟ ಸಾಮಾಜಿಕ ಮೌಲ್ಯಗಳನ್ನು ಬೋಧಿಸುತ್ತದೆ.

ಮಂತ್ರ ಮಾಂಗಲ್ಯ ಎನ್ನುವುದು ಒಂದು ಪುಸ್ತಕದ, ಒಂದು ಸಂಕಲನದ ಹೆಸರು ಮಾತ್ರವಲ್ಲ. ಇದೊಂದು ವಿವಾಹ ವಿಧಾನ. ಸಹಸ್ರಾರು ವರ್ಷಗಳ ಕಾಲ ಯಾವ ಮೌಲ್ಯಗಳನ್ನು ಭಾರತೀಯರು ದೊಡ್ಡದು ಎಂದು ಭಾವಿಸಿ ಆರಾಧಿಸುತ್ತಾ ಬಂದಿದ್ದಾರೋ ಆ ಎಲ್ಲಕ್ಕೂ ಸಂಕೇತಗಳಾಗಿರುವ ಶಕ್ತಿಯನ್ನು ವಧೂವರರು ತಮ್ಮ ಬದುಕಿನ ಅಮೃತ ಮುಹೂರ್ತಲ್ಲಿ ಈ ಮಂತ್ರಗಳ ಮೂಲಕ. ವಿವಾಹ ಸಂಹಿತೆಯ ಪ್ರತಿಜ್ಞಾ ವಿಧಿಗಳ ಮುಖಾಂತರ ತಮ್ಮ ಚೇತನಕ್ಕೆ ಆಹ್ವಾನಿಸುತ್ತಾರೆ. ಈ ವಿವಾಹ ವಿಧಾನವು ಕ್ರಮೇಣ ವಧೂವರರ ಜೀವನ ವಿಧಾನವೂ ಆಗಬೇಕೆಂಬುದು 'ಮಂತ್ರ ಮಾಂಗಲ್ಯ'ದ ಮೂಲ ಆಶಯ. ಆದ್ದರಿಂದಲೇ ಈ ಕ್ರಮದಲ್ಲಿ ಮದುವೆಯಾಗುವ ವಧೂವರರೂ ಅವರ ಮಾತಾಪಿತೃಗಳೂ, ಬಂಧುಮಿತ್ರರೂ ಕೆಲವು ಕನಿಷ್ಠ ಶಿಸ್ತನ್ನು ಕಡ್ಡಾಯವಾಗಿ ಪರಿಪಾಲಿಸಬೇಕು.

ಮಂತ್ರ ಮಾಂಗಲ್ಯ ಸರಳ ವಿವಾಹವಿಧಿಯೆಂದೇ ರೂಪಸಿರುವುದರಿಂದ ಈ ವಿವಾಹದ ಯಾವೊಂದು ಕಾರ್ಯಕ್ರಮವನ್ನೂ ಅದ್ದೂರಿಯಾಗಿ ನೆರವೇರಿಸಕೂಡದು. ಯಾವ ರೂಪದಿಂದಲೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವರದಕ್ಷಿಣೆಯನ್ನಾಗಲಿ. ವಧುದಕ್ಷಿಣೆಯನ್ನಾಗಲಿ ಯಾರು ಸ್ವೀಕರಿಸಕೂಡದು. ವಧೂವರರನ್ನು ಆತ್ಮಗೌರವವಿಲ್ಲದ ಮೃಗಗಳನ್ನಾಗಿ ಪರಿಗಣಿಸುವ ಈ ದುಡ್ಡಿನ ದಳ್ಳಾಳಿ ವ್ಯವಹಾರ ಮಂತ್ರಮಾಂಗಲ್ಯದಲ್ಲಿ ಸಂಪೂರ್ಣ ನಿಷೇಧಿಸಲಾಗಿದೆ. ಹೆಣ್ಣು ಭ್ರೂಣ ಹತ್ಯೆಯಿಂದ ಹಿಡಿದು ಮದುವೆ ಮಾಡಿಕೊಂಡ ಹೆಣ್ಣುಮಗಳನ್ನು ಬೆಂಕಿಹಚ್ಚಿ, ಸುಡುವ ಪರಮ ಪಾತಕಗಳವರೆಗೂ ಕಾರಣವಾಗಿರುವ ಈ ದುಡ್ಡಿನ ದಳ್ಳಾಳಿ ವ್ಯವಹಾರದಲ್ಲಿ ಭಾಗಿಗಳಾಗುವ ಹಿರಿಯರು

ಮಂತ್ರೋಪದೇಶಕ್ಕೂ. ಪ್ರತಿಜ್ಞಾ ವಿಧಿ ಉಪದೇಶಕ್ಕೂ, ವಧೂವರರು ಮಂತ್ರೋಚ್ಚಾರಕ್ಕೂ, ಪ್ರತಿಜ್ಞೆ ತೆಗೆದುಕೊಳ್ಳಲೂ ಅನರ್ಹರಾಗಿರುತ್ತಾರೆ.

ಮಂತ್ರಮಾಂಗಲ್ಯ ವಿವಾಹವು ಗುರುಹಿರಿಯರ ಮತ್ತು ಬಂಧು ಬಾಂದವರ ಸಮ್ಮುಖದಲ್ಲಿ ನಡೆಯುವ ಪವಿತ್ರ ವಿಧಿಯಾದುದರಿಂದ ಎರಡೂ ಕಡೆಯಿಂದ ಒಟ್ಟು ಇನ್ನೂರು ಜನರನ್ನು ಮೀರದಂತೆ ಆಹ್ವಾನಿಸಬೇಕು. ಸಂಪ್ರದಾಯದಂತೆ ಇದ್ದಬದ್ದವರನ್ನೆಲ್ಲಾ ಆಹ್ವಾನಿಸಿ ದೊಂಬಿ ಎಬ್ಬಿಸುವುದು ಮಂತ್ರಮಾಂಗಲ್ಯದ ಪಾವಿತ್ರ್ಯವನ್ನೂ ಗಾಂಭೀರ್ಯವನ್ನೂ ಸಂಪೂರ್ಣ ನಾಶ ಮಾಡುತ್ತದೆ ಗಂಡನ ಕುಟುಂಬದವರೂ ಹೆಣ್ಣಿನ ಕುಟುಂಬದವರೂ ತಮ್ಮ ನಿಜವಾದ ಶ್ರೇಯಾಕಾಂಕ್ಷಿಗಳನ್ನು ಮಾತ್ರ ಕರೆದರೆ ಅದು ನೂರರ ಮಿತಿಯನ್ನು ಖಂಡಿತಮೀರುವುದಿಲ್ಲ.

ಮಂತ್ರಮಾಂಗಲ್ಯದ ಮದುವೆಯಲ್ಲಿ ಉಡುಗೊರೆಗಳು ನಿಷಿದ್ಧ. ಯಾರು ಯಾವಾಗ ಬೇಕಾದರೂ ವಿವಾಹದ ಸವಿನೆನಪಿಗೆ ವದೂವರರಿಗೆ ಉಡುಗೊರೆಗಳನ್ನು ಕೊಡಬಹುದು, ಅಥವಾ, ಅವರಿಂದ ತೆಗೆದುಕೊಳ್ಳಬಹುದು. ಆದರೆ ಮದುವೆ ಸಂದರ್ಭದಲ್ಲಿ, ವಿವಾಹವೇದಿಕೆಯ ಬಳಿ ಎಲ್ಲರೆದರು ತಮ್ಮ ತಮ್ಮ ಉಡುಗೊರೆಗಳನ್ನು ತಂದು ಗುಡ್ಡೆಹಾಕಿ ತಮ್ಮ ಶ್ರೀಮಂತಿಕೆ ಮತ್ತು ಔದಾರ್ಯಗಳ ಸಾರ್ವಜನಿಕ ಪ್ರದರ್ಶನ ಮಾಡಲು ಯಾರಿಗೂ ಅವಕಾಶ ಇರಲೇ ಕೂಡದು.

ಯಾವುದೇ ವಾದ್ಯ ಒಲಗ ತಮ್ಮಟೆ ಧ್ವನಿವರ್ಧಕ ಮುಂತಾದ ಪ್ರಚಾರ ಸಾಮಾಗ್ರಿಗಳನ್ನು ಬಳಸಬಾರದು. ಮಂತ್ರಮಾಂಗಲ್ಯವು ಮದುವೆಯನ್ನು ವಧೂವರರ ಮತ್ತು ಕುಟುಂಬದವರ ಅತ್ಯಂತ ಖಾಸಗಿ ಸಂದರ್ಭವೆಂದು ಪರಿಗಣಿಸುತ್ತದೆ. ಈ ಸಂದರ್ಭವು ಅಲ್ಲಿ ನೆರಿಯುವವರ ಆತ್ಮಾವಲೋಕನದ. ಅಂತಃಸಾಕ್ಷಿಯ ಸಂದರ್ಭ. ಆದ್ದರಿಂದಲೇ ಅದು ಪ್ರಶಾಂತವಾದ ಗಂಭೀರವಾದ ವಾತಾವರಣದಲ್ಲಿ ನಡೆಯಬೇಕು.

ಮಂತ್ರಮಾಂಗಲ್ಯ ವಿವಾಹಕ್ಕೆ ರಾಹುಕಾಲ, ಗುಳಿಕಕಾಲ, ಯಮಗಂಡಕಾಲ, ಯಾವೂ ಇಲ್ಲ. ಇಡೀ ಮನುಷ್ಯನ ಜೀವಿತಕಾಲವೇ ಬದುಕಿನ ಸಾರ್ಥ್ಯಕ್ಯಕ್ಕಾಗಿ ಒದಗಿರುವ ಸುಮುಹೂರ್ತವೆಂದು ಪರಿಗಣಿಸುವ ಮಂತ್ರಮಾಂಗಲ್ಯವು ಅದರೊಳಗೂ ಸುಮುಹೂರ್ತ ಹುಡುಕುವುದನ್ನು ತಿರಸ್ಕರಿಸುತ್ತದೆ ಆದ್ದರಿಂದ ವಧೂವರರಿಗೆ ಸಂಬಂದಪಟ್ಟ ಗುರುಹಿರಿಯರು ಸೇರಿ ತಮ್ಮೆಲ್ಲರಿಗೂ ಅನುಕೂಲವಾದ ದಿನಾಂಕ ಮತ್ತು ಸಮಯವನ್ನು ಪರಿಗಣಿಸಿ ಕಾಲ ನಿಶ್ಚಯ ಮಾಡಬೇಕು.

ಮಂತ್ರಮಾಂಗಲ್ಯ ಮದುವೆಯಲ್ಲಿ ಈ ಪುಸ್ತಕದಲ್ಲಿ ಸೂಚಿಸಿರುವ ಮಂತ್ರ ಮತ್ತು ಪ್ರತಿಜ್ಞಾ ವಿಧಿಗಳ ಉಪದೇಶವಲ್ಲದೆ ಇನ್ನಾವುದೇ ಶಾಸ್ತ್ರಚಾರಗಳನ್ನಾಗಲೀ. ಜೋಯಿಸರಿಂದ ಜಾತಕಾದಿಗಳನ್ನು ನೋಡಿಸುವುದೇ ಆಗಲೀ ನಿಷಿದ್ಧ. ಜಾತಿ ಪದ್ಧತಿ, ಸ್ತ್ರೀ ಅಸಮಾನತೆ, ಅಸ್ಪರ್ಷತೆ ಮೊದಲಾದ ಅನಿಷ್ಟಗಳಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರಣವಾಗಿರುವ ಈ ಶಾಸ್ತ್ರಾಚಾರಗಳಿಂದ ಭಾರತೀಯರನ್ನು ವಿಮುಕ್ತಗೊಳಿಸುವುದೇ ಮಂತ್ರಮಾಂಗಲ್ಯದ ಮೂಲ ಉದ್ದೇಶ. ಇಲ್ಲಿ ಯಾವ ವೃತ್ತಿ ಪರೋಹಿತನಿಗೂ ಪ್ರವೇಶವಿಲ್ಲ. ಓದು ಬರಹ ಕಲಿತ, ಈ ಮಂತ್ರಗಳನ್ನು ಓದಿ ಅರ್ಥಮಾಡಿಕೊಳ್ಳಬಲ್ಲ ವಧೂವರರ ತಂದೆ ತಾಯಿಗಳಾಗಲೀ ಗುರುಹಿರಿಯರಾಗಲೀ ಯಾರಾದರೊಬ್ಬರು

ಮಂತ್ರಮಾಂಗಲ್ಯದ ಮಂತ್ರಗಳನ್ನೂ, ವಿವಾಹ ಸಂಹಿತೆಯನ್ನೂ ವಧೂವರರಿಗೆ ಬೋಧಿಸಬಹುದು. ಮಂತ್ರಗಳನ್ನು ಮತ್ತು ಪ್ರತಿಜ್ಞೆಗಳನ್ನು ಸ್ಪಷ್ಟವಾಗಿ ಹೇಳಿ ಅದನ್ನು ವಧೂವರರ ಕೈಲೂ ಹೇಳಿಸಬೇಕು. ಅವರು ಮಂತ್ರಗಳನ್ನು ಹೇಳಿದನಂತರ ಅವುಗಳ ಕೆಳಗೆ ಕೊಟ್ಟಿರುವ ಕನ್ನಡದ ಅರ್ಥವನ್ನು ಉಪದೇಶಿಸುವವರು ಎಲ್ಲರಿಗೂ ಕೇಳುವಂತೆ ವಿವರಿಸಬೇಕು. (ಇದನ್ನು ವಧೂವರರು ಪುನರುಚ್ಚರಿಸುವ ಅಗತ್ಯವಿಲ್ಲ) ಇದಾದನಂತರ ವಧೂವರರಿಗೆ ಅವರ ಮುಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಪ್ರತಜ್ಞಾ ವಿಧಿಗಳನ್ನು ಬೋಧಿಸಬೇಕು. ಹಿರಿಯರು ಬೋಧಿಸಿನಂತರ ವಧೂವರರು ಅವನ್ನು ಪನರುಚ್ಚರಿಸಿ ಪ್ರತಿಜ್ಞಾಸ್ವೀಕಾರ ಮಾಡಬೇಕು. ಪ್ರತಿಜ್ಞಾ ಸ್ವೀಕಾರದನಂತರ ವರನು ವಿವಾಹ ವೇದಿಕೆಯ ಮೇಲೆ ಇಟ್ಟಿರುವ ಮಹಾ ಪುರುಷರ ಫೋಟೋಗಳಿಗೂ ವಧೂವರರ ತಂದೆ ತಾಯಿಗಳಿಗೂ. ಅಲ್ಲಿ ನೆರೆದಿರುವ ಗುರುಹಿರಿಯರಿಗೂ, ಕೊನೆಯದಾಗಿ ವೇದಿಕೆ ಮೇಲೆ ತಟ್ಟೆಯಲ್ಲಿಟ್ಟಿರುವ ಮಾಂಗಲ್ಯಕ್ಕೂ ನಮಸ್ಕರಿಸಿ ವಧುವಿಗೆ ಮಾಂಗಲ್ಯ ಕಟ್ಟಬೇಕು.

**ಮಂತ್ರಮಾಂಗಲ್ಯ ವಿವಾಹಕ್ಕೆ ಬೇಕಾದ ಏರ್ಪಾಡುಗಳು:**

ಮಂತ್ರಮಾಂಗಲ್ಯ ಪ್ರಕಾರದ ಮದುವೆಗೆ ಒಂದು ಚಿಕ್ಕ ವೇದಿಕೆ ಬೇಕು. ವೇದಿಕೆ ಎಂದರೆ ಮದುವೆ ಮಂಟಪವೇನೂ ಅಲ್ಲ. ಇನ್ನೂರು ಜನರ ಸಮ್ಮುಖದಲ್ಲಿ ನಡೆಯುವ ಸಮಾರಂಭವಾದ್ದರಿಂದ ಅಷ್ಟು ಜನರಿಗೂ ಕಾಣುವಂಥ ಒಂದು ಎತ್ತರದ ಜಾಗ. ಐದಾರು ಬೆಂಚುಗಳನ್ನು ಒಟ್ಟಿಗೆ ಇಟ್ಟು ರಚಿಸುವ ವೇದಿಕೆಯಾದರೂ ಆದೀತು. ಈ ಯಾವ ಅನುಕೂಲಗಳಿಲ್ಲದಿದ್ದರೆ ಊರೊಳಗಿನ ಎತ್ತರದ ಅರಳಿಕಟ್ಟೆಯಾದರೂ ಸರಿ. ಅದರ ಮೇಲೆ ಈ ಪವಿತ್ರ ಸಮಾರಂಭಕ್ಕೆ ಆಧ್ಯಾತ್ಮಿಕ ಸಾಕ್ಷಿಗಳಾಗಿ ನಾಲ್ವರು ಮಹಾಪುರುಷರ ಫೋಟೋಗಳನ್ನು ಇಡಬೇಕು. ಈಗ ಪೌರಾಣಿಕ ಆದರ್ಶ ದಂಪತಿಗಳಾದ ಶ್ರೀರಾಮಚಂದ್ರ ಸೀತಾದೇವಿಯರ ಮತ್ತು ಅಧುನಿಕ ಆದರ್ಶದಂಪತಿಗಳೆಂದು ಪರಿಗಣಿಸಿರುವ ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಮಹಾಮಾತೆ ಶಾರದಾದೇವಿಯರ ಫೋಟೋಗಳನ್ನು ಇಡಲಾಗುತ್ತಿದೆ. ಇದರೊಡನೆ ನೀವು ಇನ್ನಾವುದೇ ದಂಪತಿಗಳನ್ನು ಆದರ್ಶವೆಂದು ಪರಿಗಣಿಸಿದಲ್ಲಿ ಅದನ್ನು ಇಡಬಹುದು. ಅದರ ಮುಂದೆ ಹಣ್ಣು ಹೂಗಳಿರುವ ತಟ್ಟೆಯಲ್ಲಿ, ವಧು ಧರಿಸುವ ಮಂತ್ರಮಾಂಗಲ್ಯವನ್ನಿಟ್ಟು ಆ ಮಹಾ ಪರುಷರ ಕೃಪಾಶೀರ್ವಾದಕ್ಕಾಗಿ ಅದನ್ನು ಅವರಿಗೆ ಸಮರ್ಪಿಸಿ ಎರಡು ಹಣತೆಗಳನ್ನು ಹಚ್ಚಿ ದೀಪ ಬೆಳಗಿಸಲಾಗುತ್ತದೆ.

ವೇದಿಕೆಯ ಬಲಭಾಗದಲ್ಲಿ ಮೂರು ಕುರ್ಚಿಗಳನ್ನೂ ಎಡಭಾಗದಲ್ಲಿ ಮೂರು ಕುರ್ಚಿಗಳನ್ನು ಇಡಬೇಕು. ಬಲಗಡೆ ಒಂದು ಕುರ್ಚಿಗಳನ್ನು ವಧುವೂ ಮಿಕ್ಕೆರಡರಲ್ಲಿ ಆಕೆಯ ತಂದೆತಾಯಿಗಳೂ. ಅವರಿಲ್ಲದಿದ್ದರೆ ಅವರಿಗೆ ಪರ್ಯಾಯವಾಗಿ ಇನ್ನು ಯಾವ ಹಿರಿಯರಿರುತ್ತಾರೋ ಅವರೂ ಕುಳಿತುಕೊಳಬೇಕು. ಇದೇ ಪ್ರಕಾರವಾಗಿ ಎಡಗಡೆ ಕುರ್ಚಿಯಲ್ಲಿ ವರನನ್ನೂ ವರನ ಕಡೆಯವರನ್ನೂ ಕುಳ್ಳಿರಿಸಬೇಕು. ತದನಂತರ ಮಂತ್ರ ಮತ್ತು ಪ್ರತಿಜ್ಞಾವಿಧಿ ಉಪದೇಶ ಮಾಡುವ ಹಿರಿಯರು ವೇದಿಕೆಯ ಮೇಲೆ ಬಂದು ಮಂತ್ರ ಮಾಂಗಲ್ಯದ ಎರಡು ಪುಸ್ತಕಗಳನ್ನು ವಧೂವರರಿಗೆ ಕೊಡಬೇಕು. ಅವರು ಮಂತ್ರೋಪದೇಶ ಆರಂಭಿಸುವ ಮೊದಲು ಇಂಥ ಮದುವೆಯ ಧ್ಯೇಯೋದ್ದೇಶಗಳನ್ನು ಸಮಾರಂಭದಲ್ಲಿ ನೆರೆದಿರುವ ಸಮುದಾಯಕ್ಕೆ ವಿವರಿಸುವುದಾದರೆ ವಿವರಿಸಬಹುದು. ಆನಂತರ ಅವರು ವರನಕೈಯ್ಯಲ್ಲಿರುವ ಪುಸ್ತಕ ತೆಗೆದುಕೊಂಡು ಮಂತ್ರ ಮತ್ತು ಪ್ರತಿಜ್ಞಾವಿಧಿಗಳ ಉಪದೇಶವನ್ನು ಪ್ರಾರಂಭಿಸಬಹುದ. ಅವರು ಉಪದೇಶಿಸುವ ಸಮಯದಲ್ಲಿ

ವಧೂವರರಿಬ್ಬರೂ ಎದ್ದು ಒಟ್ಟಿಗೇ ನಿಂತು ಒಂದೇ ಪುಸ್ತಕವನ್ನೂ ಇಬ್ಬರೂ ನೋಡಿಕೊಳ್ಳುತ್ತಾ ಅವರ ಹೇಳಿಕೊಟ್ಟಿದ್ದನ್ನು ಅಲ್ಲಿ ನೆರೆದಿರುವ ಗುರುಹಿರಿಯರಿಗೂ ಬಂಧುಬಾಂಧವರಿಗೂ ಸ್ಪಷ್ಟವಾಗಿ ಕೇಳುವಂತೆ ಪುನರುಚ್ಚರಿಸಬೇಕು. ಮಂತ್ರ ಮತ್ತು ಪ್ರತಿಜ್ಞಾವಿಧಿ ಪೂರ್ಣವಾದ ಅನಂತರ ವರನೂ ವಧುವೂ ಮೊದಲೇ ವಿವರಿಸಿದಂತೆ ಎಲ್ಲರಿಗೂ ನಮಸ್ಕರಿಸಿ ಮಾಂಗಲ್ಯಧಾರಣೆ ಮಾಡಬಹುದು.

ಆ ಯುವಕ ಯುವತಿಯರು ಈ ಪ್ರಕಾರ ಅಲ್ಲಿ ನೆರೆದಿರುವ ಗುರುಹಿರಿಯರ ಸಮ್ಮುಖದಲ್ಲಿ ದಂಪತಿಗಳಾದನಂತರ ಈ ಪುಸ್ತಕದ ಕೊನೆಯಲ್ಲಿ ಪ್ರತಿಜ್ಞಾವಿಧಿಗಳನಂತರ ಕೊಟ್ಟಿರುವ ಕಾಲಮ್ಮುಗಳಲ್ಲಿ ರುಜು ಮಾಡಬೇಕು. ಆಮೇಲೆ ವಧೂವರರ ತಂದೆತಾಯಿಗಳು ಅಥವಾ ಅದಕ್ಕೆ ಪರ್ಯಾಯವಾಗಿ ಉಪಸ್ಥಿತರಿರುವ ಹಿರಿಯರು ಅವರಿಗೆಂದಿರುವ ಕಾಲಮ್ಮುಗಳಲ್ಲಿ ರುಜು ಮಾಡಬೇಕು. ಸಾಕ್ಷೀಗಳಾಗಿ ಅಲ್ಲಿ ನೆರಿದಿರುವ ವಧೂವರರ ಗುರುಹಿರಿಯರೂ ಶ್ರೇಯಾಕಾಂಕ್ಷಿಗಳೂ ಅವರಿಗೆಂದಿರುವ ಕಾಲಮ್ಮುಗಳಲ್ಲಿ ಸಹಿ ಮಾಡಬೇಕು. ಈ ಪ್ರಕಾರವಾಗಿ ಅಷ್ಟು ಜನರೂ ರುಜು ಮಾಡಿರುವ ಮಂತ್ರಮಾಂಗಲ್ಯ ಪುಸ್ತಕಗಳಲ್ಲಿ ಒಂದನ್ನು ವಧುವಿಗೂ ಒಂದನ್ನು ವರನಿಗೂ ಕೊಡತಕ್ಕದ್ದು. ವಧೂವರರಿಬ್ಬರೂ ಈ ಎರಡು ಪವಿತ್ರ ದಾಖಲೆಗಳನ್ನು ತಮ್ಮೊಡನೆ ಅಜೀವಪರ್ಯಂತ ಜೊಪಾನವಾಗಿ ಇಟ್ಟುಕೊಳ್ಳತಕ್ಕದ್ದು.

ಮಂತ್ರಮಾಂಗಲ್ಯವು ಭಾರತರಾಜ್ಯಾಂಗದ ಕಾನೂನುಗಳಿಗೆ ಸಂಪೂರ್ಣ ಬದ್ಧವಾದುದು ಮತ್ತು ಸಂವಿಧಾನ ದತ್ತವಾದ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅನುಗುಣವಾದುದು. ಯಾರು ಯಾರನ್ನು ಯಾವುದೇ ವಿಧಾನದಲ್ಲಿ ಮದುವೆಯಾಗುವುದಾದರೂ ವಧೂವರರಿಬ್ಬರೂ ಪ್ರಾಪ್ತವಯಸ್ಕರಾಗಿರಬೇಕು. ಅಪ್ರಾಪ್ತ ವಯಸ್ಕರ ಮದುವೆ ಕೂಡದು.

ಅಲ್ಲದೆ ಯಾರು ಯಾವುದೇ ವಿಧಾನದಲ್ಲಿ ಮದುವೆಯಾದರೂ ಅದನ್ನು ರಿಜಿಸ್ಟರ್ ಮಾಡಿಸಬೇಕಾದುದು ಕಡ್ಡಾಯ ಮಾಡಬೇಕೆನ್ನುವುದು ನಮ್ಮ ಧೋರಣೆ. ಇದಕ್ಕೆ ಮಂತ್ರಮಾಂಗಲ್ಯವೂ ಹೊರತಾದುದಲ್ಲ. ನಮ್ಮ ಸಾಮಾಜಿಕ ಸನ್ನಿವೇಶದಲ್ಲಿ ಸ್ತ್ರೀಯರು ಅನೇಕವಿಧವಾದ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಬೇಕಾದುದರಿಂದ. ಮಂತ್ರಮಾಂಗಲ್ಯವು ಸಂಪೂರ್ಣ ಸ್ತ್ರೀ ಸಮಾನತೆಯನ್ನು ಬೋಧಿಸಿದರೂ ಅದು ಭಾರತೀಯ ಸಮಾಜದಲ್ಲಿ ಸಂಪೂರ್ಣ ಆಚರಣೆಗೆ ಬರುವವರೆಗೂ ವಧೂವರರು ತಮ್ಮ ವಿವಾಹವನ್ನು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ನೊಂದಾಯಿಸುವುದು ಕಡ್ಡಾಯ. ವಧೂವರರು ತಮ್ಮ ವಿವಾಹ ಸಂದರ್ಭದ ಸಂತೋಷದಲ್ಲಿ ಈ ಕರ್ತವ್ಯವನ್ನು ಮರೆಯಬಾರದು. ಅದಕ್ಕಾಗಿಯೇ ತಮಗೆ ಕೊಡುವ ಗುರುಹಿರಿಯರ ಸಹಿ ಇರುವ ಮಂತ್ರಮಾಂಗಲ್ಯ ದಾಖಲೆಯನ್ನು ಜೋಪಾನವಾಗಿ ಇಟ್ಟುಕೊಳ್ಳತಕ್ಕದ್ದು.

# ಮಂತ್ರ ಮಾಂಗಲ್ಯ(2)

**ಓಂ ಭೂಹೂಃ, ಓಂ ಭುವಹ. ಓಂ ಸುವಹ. ಓಂ ಮಹಹ.**
**ಓಂ ಜನಹ, ಓಂ ತಪಹ. ಓಗುಂ ಸತ್ಯಂ. ಓಂ ತತ್ಸವಿತುರ್ವರೇಣ್ಯಂ.**
**ಭರ್ಗೋ ದೇವಸ್ಯ ಧೀಮಹಿ |**
**ಧಿಯೋ ಯೋ ನಃ ಪ್ರಚೋದಯಾತ್ ||**
**ಓಮಾಪೋ ಜ್ಯೋತೀ ರಸೋಽಮೃತಂ ಬ್ರಹ್ಮ ಭೂರ್ಭ ವಸ್ಸುವರೋಂ ||**
- ಗಾಯತ್ರೀ ಮಂತ್ರ. ಋಗ್ವೇದ

ಓಂ ಭೂಲೋಕ, ಭುವಲೋಕ, ಓಂ ಸುವರ್ಲೋಕ ಮಹರ್ಲೋಕ
ಓಂ ಜನೋಲೋಕ ತಪೋಲೋಕ ಸತ್ಯಲೋಕಗಳೆಲ್ಲ
ಪರಬ್ರಹ್ಮ ರೂಪಗಳೇ ಎಂದೆಂದಿಗೂ.
ಎಲ್ಲಕ್ಕೂ ಪ್ರೇರಕನಾದ ಆ ಭಗವಂತನ ಶ್ರೀತೇಜವನ್ನು
ನಾವು ಧ್ಯಾನಿಸುವೆವು.
ಪ್ರೇರಿಸಲಾತನು ನಮ್ಮ ಬುದ್ಧಿಯ
ತತ್ವಜ್ಞಾನದ ಕಡೆಗೆ.

ಓಂ ಜಲ ಜ್ಯೋತಿ ರಸ ಅಮೃತಗಳೆಲ್ಲವು
ಪ್ರಣವಾತ್ಮಕ ಪರಬ್ರಹ್ಮವೆ.
ಭೂರ್ಭುವ ಸುವರ್ಲೋಕಗಳೆಲ್ಲವು
ಪ್ರಣವಾತ್ಮಕ ಪರಬ್ರಹ್ಮವೇ.

**ಓಂ ಅಸತೋ ಮಾ ಸದ್ಗಮಯ |**
**ತಮಸೋ ಮಾ ಜ್ಯೋತಿರ್ಗಮಯ |**
**ಮೃತ್ಯೋರ್ಮಾಽಮೃತಂ ಗಮಯ ||**
**ಓಂ ಶಾತಿಃ ಶಾತಿಃ ಶಾತಿಃ**
- ಬೃಹಾದಾರಣ್ಯಕ ಉಪನಿಷದ್

ಓಂ ಅಸತ್ಯದಿಂದ ಸತ್ಯದೆಡೆಗೆ
ಕತ್ತಲಿಂದ ಬೆಳಕಿನೆಡೆಗೆ
ಸಾವಿನಿಂದ ಅಮೃತದೆಡೆಗೆ ಒಯ್ಯಿ ನನ್ನನು.

**ತೇಜೋಽಸಿ ತೇಜೋ ಮಯಿ ಧೇಹಿ |**

**ವೀರ್ಯಮಸಿ ವೀರ್ಯಂ ಮಯಿ ಧೇಹಿ |**

**ಬಲಮಸಿ ಬಲಂ ಮಯಿ ಧೇಹಿ |**

**ಓಜೋಽಸಿ ಓಜೋ ಮಯಿ ಧೇಹೀ |**

**ಮನ್ಯುರಸಿ ಮನ್ಯುಂ ಮಯಿ ಧೇಹೀ |**

**ಸಹೋಸಿ ಸಹೋ ಮಯಿ ಧೇಹಿ ||**

– ಶುಕ್ಲಯಜುರ್ವೇದ ಸಂಹಿತಾ

ಓಂ ಭಗವನ್,

ನೀನೆ ತೇಜಸ್ಸು, ಅದನ್ನು ನಮ್ಮಲ್ಲೂ ತುಂಬು

ನೀನೆ ವೀರ್ಯವು, ಅದನ್ನು ನಮ್ಮಲ್ಲೂ ತುಂಬು

ನೀನೆ ಬಲವು, ತುಂಬು ನಮ್ಮಲ್ಲೂ ಬಲವ

ನೀನೆ ಓಜವು, ತುಂಬು ನಮ್ಮಲ್ಲೂ ಓಜವ

ನೀನೆ ಸಾಹಸ, ತುಂಬು ನಮ್ಮಲ್ಲೂ ಸಾಹಸ

ನೀನೆ ಧೈರ್ಯ, ತುಂಬು ನಮ್ಮಲ್ಲೂ ಧ್ಯೆರ್ಯವ

<u>ದೇವೀಸ್ತುತಿ</u>

**ಯಾ ದೇವೀ ಸರ್ವಭೂತೇಷು ವಿಷ್ಣುಮಾಯೇತಿ ಶಬ್ದಿತಾ |**

**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||**

ಯಾವ ದೇವಿ ವಿಷ್ಣು ಮಾಯೆಯೆಂದು ಎಲ್ಲ ಭೂತಳಲ್ಲೂ ನೆಲಸಿರವಳೋ

ಆಕೆಗಿದೋ ನಮ್ಮ ನಮಸ್ಕಾರ, ನಮ್ಮ ನಮಸ್ಕಾರ, ನಮ್ಮ ನಮಸ್ಕಾರ.

**ಯಾ ದೇವೀ ಸರ್ವಭೂತೇಷು ಚೇತನೇತ್ಯಭಿಧೀಯತೇ |**

**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||**

ಯಾವ ದೇವಿ ಚೈತನ್ಯದ ರೂಪದಲ್ಲಿ ಎಲ್ಲ ಭೂತಳಲ್ಲೂ ನೆಲಸಿರವಳೋ

ಆಕೆಗಿದೋ ನಮ್ಮ ನಮಸ್ಕಾರ, ನಮ್ಮ ನಮಸ್ಕಾರ, ನಮ್ಮ ನಮಸ್ಕಾರ.

**ಯಾ ದೇವೀ ಸರ್ವಭೂತೇಷು ಶಕ್ತಿ ರೂಪೇಣ ಸಂಸ್ಥಿತಾ |**

**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||**

ಯಾವ ದೇವಿ ಶಕ್ತಿ ರೂಪದಲ್ಲಿ ಎಲ್ಲ ಭೂತಳಲ್ಲೂ ನೆಲಸಿರವಳೋ
ಆಕೆಗಿದೋ ನಮ್ಮ ನಮಸ್ಕಾರ, ನಮ್ಮ ನಮಸ್ಕಾರ, ನಮ್ಮ ನಮಸ್ಕಾರ.

**ಯಾ ದೇವೀ ಸರ್ವಭೂತೇಷು ಶಾಂತಿ ರೂಪೇಣ ಸಂಸ್ಥಿತಾ |**
**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||**
ಯಾವ ದೇವಿ ಶಾಂತಿ ರೂಪದಲ್ಲಿ ಎಲ್ಲ ಭೂತಳಲ್ಲೂ ನೆಲಸಿರವಳೋ
ಆಕೆಗಿದೋ ನಮ್ಮ ನಮಸ್ಕಾರ, ನಮ್ಮ ನಮಸ್ಕಾರ, ನಮ್ಮ ನಮಸ್ಕಾರ.

**ಯಾ ದೇವೀ ಸರ್ವಭೂತೇಷು ಶ್ರದ್ಧಾ ರೂಪೇಣ ಸಂಸ್ಥಿತಾ |**
**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||**
ಯಾವ ದೇವಿ ಶ್ರದ್ಧೆಯ ರೂಪದಲ್ಲಿ ಎಲ್ಲ ಭೂತಳಲ್ಲೂ ನೆಲಸಿರವಳೋ
ಆಕೆಗಿದೋ ನಮ್ಮ ನಮಸ್ಕಾರ, ನಮ್ಮ ನಮಸ್ಕಾರ, ನಮ್ಮ ನಮಸ್ಕಾರ.

**ಯಾ ದೇವೀ ಸರ್ವಭೂತೇಷು ಕಾಂತಿ ರೂಪೇಣ ಸಂಸ್ಥಿತಾ |**
**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||**
ಯಾವ ದೇವೀ ಕಾಂತಿ ರೂಪದಲ್ಲಿ ಎಲ್ಲ ಭೂತಳಲ್ಲೂ ನೆಲಸಿರವಳೋ
ಆಕೆಗಿದೋ ನಮ್ಮ ನಮಸ್ಕಾರ, ನಮ್ಮ ನಮಸ್ಕಾರ, ನಮ್ಮ ನಮಸ್ಕಾರ.

**ಯಾ ದೇವೀ ಸರ್ವಭೂತೇಷು ದಯಾ ರೂಪೇಣ ಸಂಸ್ಥಿತಾ |**
**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||**
ಯಾವ ದೇವಿ ದಯೆಯ ರೂಪದಲ್ಲಿ ಎಲ್ಲ ಭೂತಳಲ್ಲೂ ನೆಲಸಿರವಳೋ
ಆಕೆಗಿದೋ ನಮ್ಮ ನಮಸ್ಕಾರ, ನಮ್ಮ ನಮಸ್ಕಾರ, ನಮ್ಮ ನಮಸ್ಕಾರ.

**ಯಾ ದೇವೀ ಸರ್ವಭೂತೇಷು ಮಾತೃ ರೂಪೇಣ ಸಂಸ್ಥಿತಾ |**
**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||**
ಯಾವ ದೇವಿ ಮಾತೃ ರೂಪದಲ್ಲಿ ಎಲ್ಲ ಭೂತಳಲ್ಲೂ ನೆಲಸಿರವಳೋ
ಆಕೆಗಿದೋ ನಮ್ಮ ನಮಸ್ಕಾರ, ನಮ್ಮ ನಮಸ್ಕಾರ, ನಮ್ಮ ನಮಸ್ಕಾರ.

**ಸರ್ವಮಂಗಲ ಮಾಂಗಲ್ಯೆ ಶಿವೇ ಸರ್ವಾರ್ಥಸಾಧಿಕೆ |**
**ಶರಣ್ಯೆ ತ್ರ್ಯಂಬಕೇ ಗೌರಿ ನಾರಾಯಣಿ ನಮೋಸ್ತು ತೇ ||**
ಸರ್ವಮಂಗಲಮಯೀ ಶಿವೇ ಸಕಲಾಭಿಷ್ಟ ಸಾಧಿಕೇ
ಆತ್ರಯದಾತೆಯೆ, ತ್ರಿಯಂಬಕೆ, ಗೌರಿ, ನಾರಾಯಣಿ ನಿನಗಿದೋ ನಮ್ಮ ನಮಸ್ಕಾರ.

**ಸೃಷ್ಟಿಸ್ಥಿತಿ ವಿನಾಶಾನಾಂ ಶಕ್ತಿಭೂತೇ ಸನಾತನೀ |**
**ಗುಣಾಶ್ರಯೇಽಗಣಮಯೇ ನಾರಾಯಣಿ ನಮೋಽಸ್ತು ತೇ ||**
ಸೃಷ್ಟಿಸ್ಥಿತಿ ವಿನಾಶಕಾರಣಿ, ಶಕ್ತಿಮಯೀ ದೇವಿ.
ತ್ರಿಗುಣಾತ್ಮಕೆಯಾಗಿಯೂ ಅದನ್ನು ಮೀರಿಹೆ, ನಿನಗಿದೋ ನಮ್ಮ ನಮಸ್ಕಾರ.

**ಶರಣಾಗತದೀನಾರ್ತ ಪರಿತ್ರಾಣ ಪರಾಯಣೇ |**
**ಸರ್ವಸ್ಯಾರ್ತಿಹರೇ ದೇವಿ ನಾರಾಯಣಿ ನಮೋಽಸ್ತು ತೇ ||**
ಶರಣು ಬಂದ ದೀನರಿಗೂ ಆರ್ತರಿಗೂ ನೀನೆ ಶರಣು ದೇವಿ
ಎಲ್ಲ ಜೀವಿಗಳ ಎಲ್ಲ ದುಃಖವನ್ನೂ ಪರಿಹರಿಪ ನಿನಗಿದೋ ನಮ್ಮ ನಮಸ್ಕಾರ.

**ಸರ್ವಸ್ವರೂಪೇ ಸರ್ವೇಶೇ ಸರ್ವಶಕ್ತಿಸಮನ್ವಿತೇ |**
**ಭಯೇಭ್ಯಸ್ತ್ರಾಹಿ ನೋ ದೇವಿ ದುರ್ಗೇ ದೇವಿ ನಮೋಽಸ್ತು ತೇ ||**
ಎಲ್ಲ ಶಕ್ತಿಗಳ ಪಡೆದಿರುವಾಕೆಯೆ, ಎಲ್ಲಕ್ಕೂ ಒಡತಿಯೆ,
ಎಲ್ಲವೂ ನೀನೆ ಆಗಿರುವೆ
ಓ ದುರ್ಗೆಯೆ, ಓ ದೇವಿಯೆ ಭಯವನ್ನು ತಪ್ಪಿಸು.
ನಿನಗಿದೋ ನಮ್ಮ ನಮಸ್ಕಾರ.

**ದೇವೀ ಮಹಾತ್ಮ್ಯ**

<u>ಶ್ರೀಸೀತಾರಾಮಸ್ತವನ</u>

**ವರ್ಣಾನಾಮರ್ಥಸಂಘಾನಾಂ ರಸಾನಾಂ ಛಂದಸಾಮಪಿ |**
**ಮಂಗಲಾನಾಂ ಚ ಕರ್ತಾರೌ ವಂದೇ ವಾಣೀವಿನಾಯಕೌ ||**
ವರ್ಣಕ್ಕೆ ಅರ್ಥ, ಸಮೂಹಕ್ಕೆ ರಸಛಂದಗೆಲ್ಲಕೆ
ಮಂಗಲವ ನೀಡುವ ವಾಣೀಗಣೇಶರಿಗೆ ತಲೆ ಬಾಗುತ್ತೇವೆ.

**ಭವಾನೀಶಂಕರೌ ವಂದೇ ಶ್ರದ್ಧಾವಿಶ್ವಾಸರೂಪಿಣೌ |**
**ಯಾಭ್ಯಾಂ ವಿನಾ ನ ಪಶ್ಯಂತಿ ಸಿದ್ಧಾಹ ಸ್ವಾಂತಸ್ಥಮೀಶ್ವರಮ್ ||**
ಯಾರ ಕೃಪೆಯಿಲ್ಲದೆಯೆ ಸಿದ್ಧರು
ಹೃದಯದಲ್ಲಿರುವ ಶಿವನ ಕಾಣಲಾರರೊ
ಅಂಥ ಶ್ರದ್ಧೆ, ವಿಶ್ವಾಸ ರೂಪರಿಗೆ
ಶಿವ ಶಿವೆಯರಿಗೆ ನಮಸ್ಕಾರ.

**ಸೀತಾರಾಮ ಗುಣಗ್ರಾಮ ಪುಣ್ಯಾರಣ್ಯ ವಿಹಾರಿಣೌ |**
**ವಂದೇ ವಿಶುದ್ಧ ವಿಜ್ಞಾನೌ ಕವೀಶ್ವರ ಕಪೀಶ್ವರೌ ||**
ಸುಗುಣ ಸಮೂಹನೆ ಸೀತಾರಾಮನೆ ಪುಣ್ಯಕಾನನ ಸಂಚಾರೀ
ಹೇ ಕವೀಶ್ವರನೇ, ಹೇ ಕಪೀಶ್ವರನೆ, ವಿಜ್ಞಾನಾತ್ಮಕಾ ನಿನಗಿದೋ ನಮ್ಮ ನಮಸ್ಕಾರ.

**ಉದ್ಭವಸ್ಥಿತಿ ಸಂಹಾರಕಾರಿಣೀಂ ಕ್ಲೇಶಹಾರಿಣೀಮ್ |**
**ಸರ್ವಶ್ರೇಯಸ್ಕರೀಂ ಸೀತಾಂ ನತೋಽಹಂ ರಾಮವಲ್ಲಭಾಮ್ ||**
ಸೃಷ್ಟಿಸ್ಥಿತಿ ಸಂಹಾರ ಕಾರಿಣಿಯೆ, ಸಕಲ ಕ್ಲೇಶ ಪರಿಹಾರಿಣಿಯೆ
ಸಕಲ ಸುಮಂಗಲ ಕಾರಣಿ ಸೀತೆಯೆ, ನಮಿಸುತ್ತೇವೆ ಶ್ರೀರಾಮಪ್ರಿಯೆ.

<u>ವಾಣೀಸ್ತವನ</u>

**ಬ್ರಹ್ಮಸ್ವರೂಪಾ ಪರಮಾ ಜ್ಯೋತಿರೂಪಾ ಸನಾತನೀ |**
**ಸರ್ವ ವಿದ್ಯಾಧಿದೇವೀ ಯಾ ತಸ್ಮೈ ವಾಣ್ಯೈ ನಮೋ ನಮಃ ||**
ಬ್ರಹ್ಮಸ್ವರೂಪೀಣಿಯೆ ಪರಮ ಜ್ಯೋತಿರೂಪಿಣಿಯೆ ಸನಾತನಿಯೆ ತಾಯೆ
ಎಲ್ಲ ವಿದ್ಯೆಗಳ ಮೂಲ ದೇವಿಯೇ, ತಾಯಿ ಶಾರದೆಯೇ ನಮಸ್ಕಾರ.

**ಯಯಾ ವಿನಾ ಜಗತ್ಸರ್ವಂ ತತ್ವಜ್ಜೀವನ್ಮೃತಂ ಭವೇತ್ |**
**ಜ್ಞಾನಾಧಿದೇವೀ ಯಾ ತಸ್ಮೈ ಸರಸ್ವತ್ಯೈ ನಮೋ ನಮಃ ||**
ಯಾರಿಲ್ಲದೆ ಜಗವೆಲ್ಲವೂ ಬದುಕಿಯೂ ಸತ್ತಂತೆಯೆ ತೋರುವುದೋ
ಆ ಜ್ಞಾನಾಧಿದೇವಿಗೆ, ಆ ತಾಯಿ ಸರಸ್ವತಿಗೆ ಇದೋ ನಮ್ಮ ನಮಸ್ಕಾರ.

**ಯಯಾ ವಿನಾ ಜಗತ್ಸರ್ವಂ ಮೂಕಮುನ್ಮತ್ತವತ್ಸದಾ |**
**ಯಾ ದೇವೀ ವಾಗಧೀಷ್ಠಾತ್ರೀ ತಸ್ಮೈ ವಾಣ್ಯೈ ನಮೋ ನಮಃ ||**
ಯಾರಿಲ್ಲದೆ ಜಗವೆಲ್ಲವೂ ಮೂಕನ ತರ ತೋರುತ್ತದೋ
ಉನ್ಮತ್ತನ ತರ ಇರುತ್ತದೋ
ಆ ಮಾತಿನ ಅಧಿದೇವಿಗೆ ಶಾರದೆಗೆ ಇದೋ ನಮ್ಮ ನಮಸ್ಕಾರ.

<u>ಮಹಾಲಕ್ಷ್ಮೀಸ್ತುತಿ</u>

**ಮಾತರ್ಮಾತರ್ ನಮಸ್ತೇ**
**ದಹ ದಹ ಜಡತಾಂ**

**ದೇಹಿ ಬುದ್ಧಿಂ ಪ್ರಶಾಂತಾಮ್ ||**
ನಮೋ ತಾಯೆ ನಮೋ ಮಾತೆ
ದಹಿಸು ನಮ್ಮ ಜಡತೆಯ
ನೀಡು ಬುದ್ಧಿ ಶಾಂತಿಯ.

**ಸರ್ವಜ್ಞೇ ಸರ್ವವರದೇ ಸರ್ವದುಷ್ಟಭಯಂಕರೀ |**
**ಸರ್ವದುಃಖಹರೇ ದೇವಿ ಮಹಾಲಕ್ಷ್ಮಿ ನಮೋಽಸ್ತು ತೇ ||**
ಸರ್ವಜ್ಞೆಯೇ ವರದಾಯಿನೀ, ಎಲ್ಲ ದುಷ್ಟರಿಗೂ ಭಯಕಾರೀ
ಎಲ್ಲ ದುಃಖಗಳ ಪರಿಹರಿಪಾಕೆಯೆ ತಾಯಿ ಲಕ್ಷ್ಮಿಯೇ ಇದೊ ನಮನ.

**ಸಿದ್ಧಿಬುದ್ಧಿಪ್ರದೇ ದೇವಿ ಭುಕ್ತಿಮುಕ್ತಿಪ್ರದಾಯಿನಿ |**
**ಮಂತ್ರಮೂರ್ತೇ ಸದಾದೇವೀ ಮಹಾಲಕ್ಷ್ಮಿ ನಮೋಽಸ್ತು ತೇ ||**
ಸಿದ್ಧಿ ಬುದ್ಧಿಗಳ ನೀಡುವಾಕೆಯೇ ಭುಕ್ತಿ ಮುಕ್ತಿಗಳ ಕರುಣಿಪಾಕೆಯೇ
ಮಂತ್ರಮೂರ್ತಿಯೇ ಮಹಾಲಕ್ಷ್ಮಿಯೇ ನಿನಗಿದೋ ನಮ್ಮ ನಮನ.

**ಆದ್ಯಂತರಹಿತೇ ದೇವಿ ಆದ್ಯಶಕ್ತೇ ಮಹೇಶ್ವರೀ |**
**ಯೋಗಜೇ ಯೋಗಸಂಭೂತೇ ಮಹಾಲಕ್ಷ್ಮಿ ನಮೋಽಸ್ತು ತೇ ||**
ಆದಿರಹಿತೆಯೇ ಅಂತ್ಯರಹಿತಯೇ ಆದಿಶಕ್ತಿಯೇ ಮಹೇಶ್ವರೀ
ಯೋಗ ಸಂಭವೆಯೆ ಯೋಗದಾಯಿನಿಯೆ ಮಹಾಲಕ್ಷ್ಮಿಯೇ ಇದೊ ನಮಸ್ಕಾರ.

**ಸ್ಥೂಲಸೂಕ್ಷ್ಮೇ ಮಹಾರೌದ್ರೇ ಮಹಾಶಕ್ತೇ ಮಹೋದರೇ |**
**ಮಹಾಪಾಪಹರೇ ದೇವಿ ಮಹಾಲಕ್ಷ್ಮಿ ನಮೋಽಸ್ತು ತೇ ||**
ಸ್ಥೂಲೆಯೆ ಸೂಕ್ಷ್ಮೆಯೆ, ಅತಿ ಭಯಂಕರಿಯೆ, ಮಹಾಶಕ್ತಿಯೇ ಮಹಾ ಕಾಯೆಯೇ ತಾಯಿ
ಎಲ್ಲ ಪಾಪಗಳ ಪರಿಹರಿಪಾಕೆಯೆ ಮಹಾಲಕ್ಷ್ಮಿಯೇ ಇದೋ ನಮಸ್ಕಾರ.

## <u>ಗುರುಸ್ತುತಿ</u>

**ಗುರುಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ |**
**ಗುರುರೇವ ಪರಂ ಬ್ರಹ್ಮ ತಸ್ಮೈ ಶ್ರೀಗುರುವೇ ನಮಃ ||**
ಗುರುವೆ ಬ್ರಹ್ಮನು, ಗುರುವೆ ವಿಷ್ಣುವು, ಗುರುವೆ ಈಶ್ವರನು
ಗುರುವೆ ಪರಬ್ರಹ್ಮ ಆ ಶ್ರೀ ಗರುವಿಗಿದೊ ನಮಸ್ಕಾರ.

**ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ |**
**ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರುವೇ ನಮಃ ||**
ಅಜ್ಞಾನದ ಕತ್ತಲೆಯಿಂ ಕುರುಡಾಗಿರುವೆನಗೆ
ಸುಜ್ಞಾನದ ಅಂಜನದಿಂ ಕಣ್ದೆರೆಸಿದಾತನೇ, ಶ್ರೀ ಗುರುವೆ, ನಿನಗಿದೊ ನಮ್ಮ ನಮನ.

**ಅಖಂಡಮಂಡಲಾಕಾರಂ ವ್ಯಾಪ್ತಂ ಯೇನ ಚರಾಚರಮ್ |**
**ತತ್ಪದಂ ದರ್ಶಿತಂ ಯೇನ ತಸ್ಮೈ ಶ್ರೀಗುರುವೇ ನಮಃ ||**
ಚರ ಅಚರಗಳೆಲ್ಲವನ್ನೂ ಎಡೆಬಿಡದೆ ತುಂಬಿರುವಾತನ ಶ್ರೀ ಚರಣವನ್ನು
ತೋರಿದ ಶ್ರೀ ಗುರುವೆ, ನಿನಗಿದೊ ನಮ್ಮ ನಮಸ್ಕಾರ.

**ಅನೇಕ ಜನ್ಮಸಂಪ್ರಾಪ್ತ ಕರ್ಮ ಬಂಧ ವಿದಾಹಿನೇ |**
**ಆತ್ಮಜ್ಞಾನ ಪ್ರದಾನೇನ ತಸ್ಮೈ ಶ್ರೀಗುರುವೇ ನಮಃ ||**
ಆತ್ಮಜ್ಞಾನವನಿತ್ತು ಬಹು ಜನ್ಮಗಳ ಕರ್ಮ-
ಬಂಧವನು ಕಿತ್ತೊಗೆದ ಶ್ರೀ ಗುರುವೆ, ನಿನಗಿದೊ ನಮ್ಮ ನಮಸ್ಕಾರ.

**ಶ್ರೀರಾಮಕೃಷ್ಣಸ್ತೋತ್ರ**

**ಓಂ ಹ್ರೀಂ ಋತಂ ತ್ವಮಚಲೋ ಗುಣಜಿದ್ಗುಣೇಡ್ಯಃ**
**ನಕ್ತಂ ದಿವಂ ಸಕರುಣಂ ತವ ಪಾದಪದ್ಮಮ್ |**
**ಮೋಹಂಕಷಂ ಬಹುಕೃತಂ ನ ಭಜೇ ಯತೋಽಹಂ**
**ತಸ್ಮಾತ್ತ್ವಮೇವ ಶರಣಂ ಮಮ ದೀನಬಂಧೋ ||೧||**
ಓಂ. ಹ್ರೀಂ. ನೀನು ಸತ್ಯಸ್ವರೂಪನು. ಅಚಲನು, ತ್ರಿಗುಣಗಳನ್ನು ಜಯಸಿದವನು ಮತ್ತು ಕಲ್ಯಾಣ ಗುಣಗಳ ಮೂಲಕ ಪ್ರಶಂಸನೀಯನು. ಮೋಹನಾಶಕವೂ. ಪೂಜನೀಯವೂ ಆದ ನಿನ್ನ ಅಡಿದಾವರೆಗಳನ್ನು ನಾನು ಹಗಲೂ ರಾತ್ರಿಯೂ ಭಜಿಸಲಿಲ್ಲ. ಆದುದರಿಂದ ಹೆ, ದೀನಬಂಧು, ನೀನೇ ನನಗೆ ಶರಣು.

**ಭಕ್ತಿರ್ಭಗಶ್ಚ ಭಜನಂ ಭವಭೇದಕಾರಿ**
**ಗಚ್ಛಂತ್ಯಲಂ ಸುವಪುಲಂ ಗಮನಾಯ ತತ್ವಮ್ |**
**ವಕ್ತ್ರೋ ಧೃತೋಽಪಿ ಹೃದಯೇ ನ ವಿಭಾತಿ ಕಿಂಚಿತ್**
**ತಸ್ಮಾತ್ ತ್ವಮೇವಶರಣಂ ಮಮ ದೀನಬಂಧೋ ||೨||**
ಸಂಸಾರನಾಶಕವಾದ ಭಕ್ತಿಜ್ಞಾನೈಶ್ವರ್ಯಾದಿಗಳು ಮತ್ತು ಭಜನೆ ಇವು ಮಹಾತತ್ತ್ವವನ್ನು ಹೊಂದಲುಸಾಕು: ಆದರೆ

ಇದು ನನ್ನ ಬರಿಯ ಮಾತಾಗಿ ಹೃದಯದಲ್ಲಿ ಸ್ವಲ್ಪವೂ ಹೊಳೆಯದೆ ಇರುವುದರಿಂದ ಧೀನಬಂಧು, ನೀನೇ ನನಗೆ ಶರಣು.

**ತೇಜಸ್ತರಂತಿ ತರಸಾ ತ್ವಯಿ ತೃಪ್ತತೃಷ್ಣಾಃ**
**ರಾಗೇ ಕೃತೇ ಋತಪಥೇ ತ್ವಯಿ ರಾಮಕೃಷ್ಣೇ ।**
**ಮರ್ತ್ಯಾಮೃತಂ ಶವ ಪದಂ ಮರಣೋರ್ಮಿನಾಶಂ**
**ತಸ್ಮಾತ್ ತ್ವಮೇವಶರಣಂ ಮಮ ದೀನಬಂಧೋ ॥೩॥**

ಹೇ ರಾಮಕೃಷ್ಣ ಋತಪಥನಾದ ನಿನ್ನಲ್ಲಿ ಅನುರಾಗವು ಉಂಟಾದರೆ ಮನುಷ್ಯರು ನಿನ್ನನ್ನು ಹೊಂದಿ ಪೂರ್ಣಕಾಮರಾಗಿ ಶೀಘ್ರವಾಗಿ ರಜೋ ಗುಣವನ್ನೂ ದಾಟುವರು: ಮರಣವೆಂಬ ಅಲೆಗಳನ್ನು ನಾಶಮಾಡುವ ನಿನ್ನ ಚರಣಗಳು ಮರ್ತ್ಯಲೋಕದಲ್ಲಿ ಅಮೃತವಾಗಿರುವುವು. ಆದುದರಿಂದ ಹೇ ದೀನಬಂಧು. ನೀನೆ ನನಗೆ ಶರಣು.

**ಕೃತ್ಯಂ ಕರೋತಿ ಕಲುಷಂ ಕುಹಕಾಂತಕಾರಿ**
**ಷ್ಣಾಂತಂ ಶಿವಂ ಸುವಿಮಲಂ ತವ ನಾಮ ನಾಥ ।**
**ಯಸ್ಮಾದಹಂ ತ್ವತರಣೋ ಜಗದೇಕಗಮ್ಯ**
**ತಸ್ಮಾತ್ ತ್ವಮೇವಶರಣಂ ಮಮ ದೀನಬಂಧೋ ॥೪॥**

ಹೇ ನಾಥ, ಮಾಯೆಯನ್ನು ನಾಶಮಾಡುವುದೂ, ಮಂಗಳವೂ, ವಿಮಲವೂ 'ಷ್ಣ' ಎಂಬ ಅಕ್ಷರದಿಂದ ಅಂತ್ಯವಾಗಿರುವುದ ಅದು ನಿನ್ನ ಹೆಸರು ಪಾಪವನ್ನು ಕೂಡ ಪುಣ್ಯವನ್ನಾಗಿ ಮಾಡುವುದು. ಜಗತ್ತಿಗೆ ಏಕಮಾತ್ರ ಗುರಿಯಾದ ದೀನಬಂಧು, ನನಗೆ ಯಾವ ಆಶ್ರಯವೂ ಇಲ್ಲದಿರುವುದರಿಂದ ನೀನೆ ನನಗೆ ಶರಣು.

**ಓಂ ಸ್ಥಾಪಕಾಯ ಚ ಧರ್ಮಸ್ಯ ಸರ್ವಧರ್ಮ ಸ್ವರೂಪಿಣೀ ।**
**ಅವತಾರವರಿಷ್ಠಾಯ ರಾಮಕೃಷ್ಣಾಯ ತೇ ನಮಃ ॥೫॥**

ಧರ್ಮಸಂಸ್ಥಾಪಕನೂ, ಸರ್ವಧರ್ಮಸ್ವರೂಪಿಯೂ, ಅವತಾರ ಶ್ರೇಷ್ಠನೂ ಆದ ಶ್ರೀರಾಮಕೃಷ್ಣನಿಗೆ ನಮಸ್ಕಾರಗಳು.

**<u>ಶ್ರೀಶಾರದಾದೇವೀಸ್ತೋತ್ರ</u>**

**ಪ್ರಕೃತಿಂ ಪರಮಾಮಭಯಾಂ ವರದಾಂ**
**ನರರೂಪಧರಾಂ ಜನತಾಪಹರಾಮ್**
**ಶರಣಾಗತಸೇವಕತೋಷಕರೀಂ**
**ಪ್ರಣಮಾಮಿ ಪರಾಂ ಜನನೀಂ ಜಗತಾಮ್**

ಪರಮಪ್ರಕೃತಿಸ್ವರೂಪಳೂ, ಅಭಯವನ್ನು ನೀಡುವವಳೂ, ವರಗಳನ್ನು ಕೊಡುವವಳೂ, ನರರೂಪವನ್ನು

ಧರಿಸಿರುವವಳೂ, ಜನರ ದಃಖವನ್ನು ಪರಿಹರಿಸುವವಳೂ, ಶರಣಾಗತರಾದ ಭಕ್ತರನ್ನು ಸಂತೋಷಪಡಿಸುವವಳೂ ಆಗಿರುವ ಜಗಜ್ಜನನಿಯನ್ನು ನಮಿಸುತ್ತೇನೆ.

**ಗುಣಹೀನಸುತಾನಪರಾಧಯುತಾನ್**
**ಕೃಪಯಾಽದ್ಯ ಸಮುದ್ಧರ ಮೋಹಗತಾನ್ ।**
**ತರಣೀಂ ಭವಸಾಗರಪಾರಕರೀಂ**
**ಪ್ರಣಮಾಮಿ ಪರಾಂ ಜನನೀಂ ಜಗತಾಮ್**

ಗುಣಹೀನರು, ಅಪರಾಧಿಗಳೂ, ಮೋಹವಶರೂ ಆದ (ನಿನ್ನ) ಮಕ್ಕಳನ್ನು, ಇಂದೇ ಕೃಪೆಮಾಡಿ, ಉದ್ಧರಿಸು; ಸಂಸಾರಸಾಗರವನ್ನು ದಾಟಿಸುವ ನಾವೆಯಂತಿರುವ ಜಗಜ್ಜನನಿಯನ್ನು ನಮಿಸುತ್ತೇನೆ.

**ವಿಷಯಂ ಕುಸುಮಂ ಪರಿಹೃತ್ಯ ಸದಾ**
**ಚರಣಾಂಬುರುಹಾಮೃತಶಾಂತಿಸುಧಾಮ್**
**ಪಿಬ ಭೃಂಗಮನೋ ಭವರೋಗಹರಾಂ**
**ಪ್ರಣಮಾಮಿ ಪರಾಂ ಜನನೀಂ ಜಗತಾಮ್**

ಎಲೈ ಮನಸ್ಸೆಂಬ ದುಂಬಿಯೆ, ವಿಷಯವೆಂಬ ಹೂವನ್ನು ಸರ್ವದಾ ತ್ಯಜಿಸಿ. ಭವರೋಗವನ್ನು ನಿವಾರಿಸುವ, ಶ್ರೀಮಾತೆಯ ಚರಣಕಮಲಗಳೆಂಬ ಅಮರವಾದ ಶಾಂತಿ-ಸುಧೆಯನ್ನು ಸೇವಿಸು; ಜಗಜ್ಜನನಿಯನ್ನು ನಾನು ನಮಿಸುತ್ತೇನೆ.

**ಕೃಪಾಂ ಕುರು ಮಹಾದೇವಿ ಸುತೇಷು ಪ್ರಣತೇಷು ಚ**
**ಚರಣಾಶ್ರಯದಾನೇನ ಕೃಪಾಮಯಿ ನಮೋಽಸ್ತು ತೇ**

ಹೇ ಮಹಾದೇವಿ. ನಿನ್ನನ್ನು ನಮಸ್ಕರಿಸುವ ಮಕ್ಕಳಿಗೆ ನಿನ್ನ ಚರಣಗಳಲ್ಲಿ ಆಶ್ರಯಕೊಟ್ಟು ಕೃಪೆಮಾಡು: ಹೇ ಕೃಪಾಮಯಿ, ನಿನಗೆ ನಮಸ್ಕಾರ.

**ಲಜ್ಜಾಪಟಾವೃತೇ ನಿತ್ಯಂ ಶಾರದೇ ಜ್ಞಾನದಾಯಿಕೇ**
**ಪಾಪೇಭ್ಯೋ ನಃ ಸದಾ ರಕ್ಷ ಕೃಪಾಮಯಿ ನಮೋಽಸ್ತು ತೇ**

ಲಜ್ಜಾಸ್ವಭಾವವುಳ್ಳವಳೂ, ಜ್ಞಾನವನ್ನು ಕೊಡುವವಳೂ ಆದ ಶ್ರೀ ಶಾರದೆ, ನಮ್ಮನ್ನು ಪಾಪಗಳಿಂದ ಯಾವಾಗಲೂ ರಕ್ಷಿಸು; ಹೇ ಕೃಪಾಮಯಿ, ನಿನಗೆ ನಮಸ್ಕಾರ.

**ರಾಮಕೃಷ್ಣಗತಪ್ರಾಣಾಂ ತನ್ನಾಮಶ್ರವಣಪ್ರಿಯಾಮ್**
**ತದ್ಭಾವ ರಂಜಿತಾಕಾರಾಂ ಪ್ರಣಮಾಮಿ ಮುಹುರ್ಮುಹುಃ**

ಶ್ರೀರಾಮಕೃಷ್ಣರಲ್ಲಿ ಯಾರ ಪ್ರಾಣವು ಸೇರಿರುವುದೋ, ಶ್ರೀರಾಮಕೃಷ್ಣರ ನಾಮಶ್ರವಣವು ಯಾರಿಗೆ ಪ್ರಿಯವಾದುದೋ,

ಶ್ರೀರಾಮಕೃಷ್ಣರ ದಿವ್ಯಭಾವಗಳಿಂದ ಯಾರ ರೂಪವು ರಂಜಿಸುವುದೋ, ಆ ಜಗಜ್ಜನನಿಯನ್ನು ಪುನಃ ಪುನಃ ನಮಸ್ಕರಿಸುತ್ತೇನೆ.

**ಪವಿತ್ರಂ ಚರಿತಂ ಯಸ್ಯಾಃ ಪವಿತ್ರಂ ಜೀವನಂ ತಥಾ**
**ಪವಿತ್ರತಾಸ್ವರೂಪಿಣ್ಯೈ ತಸ್ಯೈ ಕುರ್ಮೋ ನಮೋ ನಮಃ**
ಯಾರ ಶೀಲವು ಪವಿತ್ರವಾದುದೊ, ಹಾಗೆಯೇ ಯಾರ ಜೀವನವು (ಕೂಡ) ಪವಿತ್ರವಾದುದೊ. ಪವಿತ್ರತೆಯ ಸ್ವರೂಪಿಣಿಯಾದ ಆ ಶ್ರೀ ಶಾರದೆಗೆ ಪುನಃ ಪುನಃ ನಮಸ್ಕರಿಸುತ್ತೇನೆ.

**ದೇವೀಂ ಪ್ರಸನ್ನಾಂ ಪ್ರಣತಾರ್ತಿಹಂತ್ರೀಂ**
**ಯೋಗೀಂದ್ರಪೂಜ್ಯಾಂ ಯುಗಧರ್ಮಪಾತ್ರೀಮ್**
**ತಾಂ ಶಾರದಾಂ ಭಕ್ತಿವಿಜ್ಞಾನದಾತ್ರೀಂ**
**ದಯಾಸ್ವರೂಪಾಂ ಪ್ರಣಮಾಮಿ ನಿತ್ಯಮ್**
ಪ್ರಸನ್ನಳೂ, ಶರಣಾಗತರಾದವರ ದುಃಖವನ್ನು ನಾಶ ಮಾಡುವವಳೂ, ಯೋಗೀಂದ್ರರಿಂದ ಪೂಜಿಸಲ್ಪಡುವವಳೂ, ಯುಗಧರ್ಮವನ್ನು ರಕ್ಷಿಸುವವಳೂ, ಭಕ್ತಿ ವಿಜ್ಞಾನಗಳನ್ನು ಕೊಡುವವಳೂ, ದಯಾಸ್ವರೂಪಳೂ ಆಗಿರುವ ಅ ಶ್ರೀ ಶಾರದಾದೇವಿಯನ್ನು ನಿತ್ಯವೂ ನಮಿಸುತ್ತೇನೆ.

**ಸ್ನೇಹೇನ ಬಧ್ನಾಸಿ ಮನೋಽಸ್ಮದೀಯಂ**
**ದೋಷಾನಶೇಷಾನ್ ಸಗುಣೀ ಕರೋಷಿ**
**ಅಹೇತುನಾ ನೋ ದಯಸೇ ಸದೋಷಾನ್**
**ಸ್ವಾಂಕೇ ಗೃಹೀತ್ವಾ ಯದಿದಂ ವಿಚಿತ್ರಮ್**
ನಮ್ಮ ಮನಸ್ಸನ್ನು ಪ್ರೀತಿಯಿಂದ ಬಂಧಿಸಿರುವೆ; ನಮ್ಮ ದೋಷಗಳನ್ನು ನಿಶ್ಶೇಷವಾಗಿ ನಿರ್ಮೂಲಮಾಡಿ ನಮ್ಮನ್ನು ಗುಣವಂತರನ್ನಾಗಿ ಮಾಡಿರುವೆ; ದೋಷವಂತರಾದ ನಮಗೆ ನಿನ್ನ ಮಡಿಲಲ್ಲಿ ಆಶ್ರಯ ಕೊಟ್ಟು ಆಹೇತು ದಯೆಯನ್ನು ತೋರಿಸಿದ್ದೀಯೆ. ಇದು ವಿಚಿತ್ರ!

**ಪ್ರಸೀದ ಮಾತರ್ವಿನಯೇನ ಯಾಚೇ**
**ನಿತ್ಯಂ ಭವ ಸ್ನೇಹವತೀ ಸುತೇಷು**
**ಪ್ರೇಮೈಕ ಬಿಂದುಂ ಚಿರದಗ್ಧ ಚಿತ್ತೇ**
**ವಿಷಿಂಚ ಚಿತ್ತಂ ಕುರು ನಃ ಸುಶಾಂತಮ್**
ಎಲೈ ತಾಯಿಯೇ, ನಮ್ಮ ಮೇಲೆ ಪ್ರಸನ್ನಳಾಗು ಎಂದು ವಿನಯ ಪೂರ್ವಕವಾಗಿ ಬೇಡುತ್ತೇನೆ; ಮಕ್ಕಳ ಮೇಲೆ ಯಾವಾಗಲೂ ಸ್ನೆಹವುಳ್ಳವಳಾಗು; ಚಿರಕಾಲದಿಂದ ಬೆಂದು ಬಳಲಿದ ನಮ್ಮ ಚಿತ್ತದಲ್ಲಿ ಒಂದು ಪ್ರೇಮ ಬಿಂದುವನ್ನು ಚಿಮುಕಿಸಿ. ನಮ್ಮ ಚಿತ್ತವನ್ನು ಶಾಂತಗೊಳಿಸು.

**ಜನನೀಂ ಶಾರದಾಂ ದೇವೀಂ ರಾಮಕೃಷ್ಣಂ ಜಗದ್ಗುರುಮ್**
**ಪಾದಪದ್ಮೇ ತಯೋಃ ಶ್ರೀತ್ವಾ ಪ್ರಣಮಾಮಿ ಮುಹುರ್ಮುಹುಃ**
ಜನನಿಯಾದ ಶ್ರೀಶಾರದಾದೇವಿ ಮತ್ತು ಜಗದ್ಗುರುವಾದ ಶ್ರೀರಾಮಕೃಷ್ಣ - ಇವರ ಚರಣಕಮಲಗಳನ್ನು ಆಶ್ರಯಿಸಿ,
ಪುನಃ ಪುನಃ ನಮಸ್ಕರಿಸುತ್ತೇನೆ.

**ಸಮಾನೋ ಮಂತ್ರಸ್ಸಮಿತಿಸ್ಸಮಾನೀ**
**ಸಮಾನಂ ಮನಸ್ಸಹ ಚಿತ್ತಮೇಷಾಮ್ ||**
**ಸಮಾನೀ ವ ಆಕೂತಿಸ್ಸಮಾನಾ ಹೃದಯಾನಿ ವಃ |**
**ಸಮಾನಮಸ್ತು ವೋ ಮನೋ ಯಥಾ ವಸ್ಸುಸಹಾಸತಿ ||**
- ಋಗ್ವೇದ

ಸಮಾನವಾಗಲಿ ನಿಮ್ಮ ಪ್ರಾರ್ಥನೆ
ಸಮಾನವಾಗಲಿ ನಿಮ್ಮ ಧ್ಯೇಯ
ಸಮಾನವಾಗಲಿ ಉದ್ದೇಶ.
ಸಮಾನವಾಗಲಿ ಕೆಲಸ ಕಾರ್ಯ
ಸಮಾನವಾಗಲಿ ಆಶೋತ್ತರಗಳು.
ಒಂದೇ ಆಗಲಿ ನಿಮ್ಮ ಹೃದಯ
ಒಂದೇ ಆಗಲಿ ನಿಮ್ಮ ಗುರಿ ಗತಿ
ಮತ್ತೆ
ಪೂರ್ಣವಾಗಲಿ ನಿಮ್ಮ ಈ ಶುಭದೈಕ್ಯ.